***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 18.11.2025***

***ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ***

1. ನಾನು ಪಿಯುಸಿ ವರೆಗೆ ಓದಿದ್ದೇನೆ. ಸಾಕ್ಷ್ಯ ಪ್ರಮಾಣಪತ್ರವನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ಕೊಟ್ಟೆನು. ನಾನು ಆ ದಿನ ಓಡಿಸುತ್ತಿದ್ದ ಗಾಡಿ ಮತ್ತು ಎತ್ತುಗಳು ನನಗೆ ಸೇರಿದವು. ನನಗೆ ಸ್ವಂತ ಜಮೀನು ಸ್ವಲ್ಪ ಇದೆ. ನನ್ನ ಜಮೀನಿನ ಪಹಣಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. 2022 ರಲ್ಲಿ ನಾನು ಎತ್ತುಗಳನ್ನು ಸೀತಾಪುರದಲ್ಲಿ ಖರೀದಿ ಮಾಡಿದೆನು. ಆ ಎತ್ತುಗಳ ಬೆಲೆ ರೂ.1,80,000/-. ಎತ್ತುಗಳನ್ನು ಖರೀದಿ ಮಾಡಿದಾಗ ಮಾರಾಟಗಾರರಿಂದ ಯಾವುದೇ ರಶೀದಿ ಪಡೆದುಕೊಂಡಿಲ್ಲ. ಆ ಎತ್ತುಗಳಿಗೆ ಆರು ಹಲ್ಲುಗಳು ಇದ್ದವು. ಸಾಕ್ಷಿ ಸ್ವತಃ ಸುಮಾರು 4 ರಿಂದ 5 ವರ್ಷಗಳ ಪ್ರಾಯ ಎತ್ತುಗಳಿಗೆ ಆಗಿತ್ತು ಎಂದು ಹೇಳುತ್ತಾರೆ. ನಾನು ಸಕ್ಕರೆ ಫ್ಯಾಕ್ಟರಿಗೆ ಕಬ್ಬನ್ನು ತುಂಬಿಕೊಂಡು ಹೋಗುತ್ತಿದ್ದೆನು. ದರಸಗುಪ್ಪೆಯಿಂದ ರಸ್ತೆಗೆ ಬರಬೇಕಾದರೆ ತಿರುವು ಇದೆ ಎಂದರೆ ಸರಿ. ನೀವು ಹಿಂದೆ ಬರುವ ವಾಹನವನ್ನು ನೋಡದೆ ಒಮ್ಮೆಲೆ ಎತ್ತಿನಗಾಡಿಯನ್ನು ಬಲಭಾಗಕ್ಕೆ ತಿರುಗಿಸಿದ ಕಾರಣ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ.

2. ಅಪಘಾತ ಪಡಿಸಿದ ವಾಹನದ ಸಂಖ್ಯೆ ತಮಿಳುನಾಡಿನ ನೋಂದಣಿಯ 5330 ಆಗಿತ್ತು ಎಂದು ಹೇಳುತ್ತಾರೆ. ಅಪಘಾತ ರಾತ್ರಿ 11 ಗಂಟೆಗೆ ಆಯಿತು. ಆ ಸಮಯದಲ್ಲಿ ಕತ್ತಲು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಫ್ಯಾಕ್ಟರಿಯ ವಿದ್ಯುತ್ ಬೆಳಕು ಇತ್ತು ಎಂದು ಹೇಳುತ್ತಾರೆ. ಎತ್ತಿನ ಗಾಡಿಯನ್ನು ಸಬ್ಬನಕುಪ್ಪೆ ಗ್ರಾಮದಲ್ಲಿ ಒಂದು ಕಾರ್ಖಾನೆಯಲ್ಲಿ ರಿಪೇರಿ ಮಾಡಿಸಿದೆವು. ಎತ್ತಿನ

*ಗಾಡಿ ರಿಪೇರಿ ಮಾಡಿಸಿದ ಬಗ್ಗೆ ಅದರ ಬಿಲ್ಲು ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ರಿಪೇರಿ ಮಾಡಿದವರು ಒಂದು ಪತ್ರ ಬರೆದುಕೊಟ್ಟಿದ್ದಾರೆಂದು ಹೇಳುತ್ತಾರೆ. ನಿಪಿ.9 ರಲ್ಲಿ ರೂ.22,000/- ಇರುವುದನ್ನು ನೀವೆ ತಿದ್ದಿ ರೂ.32,000/- ಮಾಡಿರುತ್ತೀರಾ ಎಂದರೆ ಸರಿಯಲ್ಲ.*

*3. ಪಶು ವೈದ್ಯಾಧಿಕಾರಿ ಕೊಂಬು ಮುರಿದಿರುವ ಒಂದು ಎತ್ತಿಗೆ ರೂ.70,000/- ಬೆಲೆ ಬಾಳುತ್ತದೆ ಎಂದು ವರದಿ ನೀಡಿದ್ದಾರೆ ಎಂದರೆ ಸಾಕ್ಷಿ ಅವರು ಕಡಿಮೆ ಹೇಳಿದ್ದಾರೆಂದು ಹೇಳುತ್ತಾರೆ. ಹಾಗೂ ರೂ.80,000/- ಬೆಲೆ ಬಾಳುತ್ತದೆ ಎಂದು ಹೇಳುತ್ತಾರೆ. ಇನ್ನೊಂದು ಎತ್ತು ಕೆಲಸ ಮಾಡಲು ಅರ್ಹವಾಗಿದೆ ಎಂದು ಪ್ರಮಾಣಪತ್ರವನ್ನು ಪಶು ವೈದ್ಯಾಧಿಕಾರಿಗಳು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸುಳ್ಳು ವರದಿ ನೀಡಿದ್ದಾರೆಂದು ಹೇಳುತ್ತಾರೆ. ನಾನು ದಿನಕ್ಕೆ ಎತ್ತು ಗಾಡಿಯಿಂದ ರೂ.2,000/-ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಪ್ರಮಾಣೀಕರಿಸಿದೆ ಎಂದರೆ ಸರಿಯಲ್ಲ. ಆದಾಯದ ನಷ್ಟ ಉಂಟಾಗಿರುವ ಬಗ್ಗೆ ನೀವು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೊಲೀಸರನ್ನು ಷಾಮೀಲು ಮಾಡಿಕೊಂಡು ಲಾರಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***